**All India Radio: Bangalore**
**National Bulletin In Kannada**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು
**21.03.2025 7.35 a.m.**
***************

ಮುಖ್ಯಾಂಶಗಳು

೧. ಗ್ರಾಮಾಭಿವೃದ್ಧಿ ವಿಕಸಿತ ಭಾರತ ಹಾದಿಯ ಮೊದಲ ಹೆಜ್ಜೆಯಾಗಿದೆ - ಪ್ರಧಾನಿ ನರೇಂದ್ರ ಮೋದಿ

೨. ಕೇಂದ್ರ ಸರ್ಕಾರ ಮತ್ತು ಐಟಿ ವಲಯದ ಸಹಯೋಗದೊಂದಿಗೆ ಸೇವಾ ರಫ್ತು ೪೫೦ ಶತಕೋಟಿ ಡಾಲರ್‌ಗೆ ಏರಲು ಸಾಧ್ಯ - ಕೇಂದ್ರ ಸಚಿವ ಪಿಯೂಶ್ ಗೋಯಲ್

೩. ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿಯ ಮೊದಲ ಮಹಿಳಾ ಅಧ್ಯಕ್ಷೆಯಾಗಿ ಜಿಂಬಾಬ್ವೆಯ ಕಿರ್ಸ್ಟಿ ಕೊವೆಂಟ್ರಿ ಆಯ್ಕೆ

೪. ಸ್ವಿಸ್ ಓಪನ್ ಬ್ಯಾಡ್ಮಿಂಟನ್; ಮಹಿಳಾ ಡಬಲ್ಸ್‌ನಲ್ಲಿ ಭಾರತದ ತ್ರಿಶಾ- ಗಾಯತ್ರಿ ಜೋಡಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ

***************

ಗ್ರಾಮಗಳನ್ನು ಅಭಿವೃದ್ಧಿಪಡಿಸುವುದು, ವಿಕಸಿತ ಭಾರತ ನಿರ್ಮಾಣದೆಡೆಗಿನ ಮೊದಲ ಹೆಜ್ಜೆಯಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

ಗುಜರಾತ್‌ನ ಭಾರ್ವದ್ ಸಮಾಜದ ಬವಲಿಯಾಲಿ ಧಾಮ್ ಕಾರ್ಯಕ್ರಮದ ಸಂದರ್ಭದಲ್ಲಿ ವೀಡಿಯೊ ಸಂದೇಶ ನೀಡಿದ ಅವರು, ವಿಕಸಿತ ಭಾರತ ಗುರಿ ಸಾಕಾರಕ್ಕೆ ಸಾಮೂಹಿಕ ಪ್ರಯತ್ನಗಳ ಅಗತ್ಯವಿದೆ. "ಸಬ್ಕಾ ಪ್ರಾಯಸ್" ದೇಶದ ದೊಡ್ಡ ಶಕ್ತಿ ಎಂದು ಪುನರುಚ್ಚರಿಸಿದರು.

ಆಧುನಿಕತೆಯ ಮೂಲಕ ಸಮುದಾಯವನ್ನು ಸಬಲೀಕರಣಗೊಳಿಸಲು ಶಿಕ್ಷಣ ಪ್ರಮುಖ ಪಾತ್ರವಹಿಸುತ್ತದೆ ಎಂದ ಪ್ರಧಾನಿ. ಮಕ್ಕಳು, ವಿಶೇಷವಾಗಿ ಹೆಣ್ಣುಮಕ್ಕಳ ಶೈಕ್ಷಣಿಕ ಅಭಿವೃದ್ಧಿಯಾಗಿ ಸದೃಢ ಸಮಾಜಕ್ಕೆ ಕೊಡುಗೆ ನೀಡಬೇಕು ಎಂದರು.

ಜಾನುವಾರು ಸಾಕಣೆದಾರರಿಗೆ ಕಿಸಾನ್ ಕ್ರೆಡಿಟ್ ಕಾರ್ಡ್‌ಗಳನ್ನು ಪರಿಚಯಿಸುವ ಬಗ್ಗೆಯೂ ಪ್ರಸ್ತಾಪಿಸಿದ ಅವರು, ಸ್ಥಳೀಯ ಗೋ ತಳಿಗಳ ಸಂರಕ್ಷಣೆ ಮತ್ತು ಬೆಳವಣಿಗೆಗೆ ರಾಷ್ಟ್ರೀಯ ಗೋಕುಲ್ ಮಿಷನ್ ಒಂದು ಪ್ರಮುಖ ಉಪಕ್ರಮವಾಗಿದೆ ಎಂದು ಒತ್ತಿ ಹೇಳಿದರು.

***************

೪೫೦ ಶತಕೋಟಿ ಡಾಲರ್ ಸೇವಾ ರಫ್ತು ಗುರಿಯನ್ನು ಸಾಧಿಸಲು ಸರ್ಕಾರ ಮತ್ತು ಮಾಹಿತಿ ತಂತ್ರಜ್ಞಾನ ವಲಯದಿಂದ ಸಾಮೂಹಿಕ ಪ್ರಯತ್ನದ ಬದ್ಧತೆಗೆ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೋಯಲ್ ಕರೆ ನೀಡಿದ್ದಾರೆ.

ನವದೆಹಲಿಯಲ್ಲಿ ನಡೆದ ನ್ಯಾಸ್‌ಕಾಮ್ ಜಾಗತಿಕ ಸಮಾವೇಶ ೨೦೨೫ ರ ಉದ್ಘಾಟನಾ ಅಧಿವೇಶನವನ್ನುದ್ದೇಶಿಸಿ ಮಾತನಾಡಿದ ಅವರು, ಮಾಹಿತಿ ತಂತ್ರಜಾನ ವಲಯವನ್ನು ಮುಂಚೂಣಿಯಲ್ಲಿಟ್ಟುಕೊಂಡು ೨೦೨೫-೨೬ ರಲ್ಲಿ, ಭಾರತದ ಸೇವೆಗಳ ರಫ್ತುಗಳು, ಸರಕು ರಫ್ತುಗಳನ್ನು ಮೀರಿಸಬಹುದು. ಈ ವರ್ಷ ಸೇವಾ ರಫ್ತು ೩೮೦ ಬಿಲಿಯನ್ ಡಾಲರ್‌ಗಳಿಂದ ೩೮೫ ಬಿಲಿಯನ್ ಡಾಲರ್‌ಗಳವರೆಗೆ ತಲುಪುವ ನಿರೀಕ್ಷೆಯಿದ್ದು, ಇದರಿಂದ ಭಾರತದ ಜಾಗತಿಕ ಉಪಸ್ಥಿತಿ ಮತ್ತಷ್ಟು ಬಲಗೊಳ್ಳಲಿದೆ ಎಂದು ಸಚಿವರು ತಿಳಿಸಿದರು.

ಧ್ವನಿ: ಪಿಯೂಶ್ ಗೋಯಲ್

***************

ಬಿಜೆಪಿ ತನ್ನ ಲೋಕಸಭಾ ಸದಸ್ಯರಿಗೆ ಇಂದು ಲೋಕಸಭೆಯಲ್ಲಿ ಹಾಜರಿರುವಂತೆ ಸೂಚಿಸಿ ವಿಪ್ ಜಾರಿ ಮಾಡಿದೆ. ಕೇಂದ್ರ ಬಜೆಟ್‌ಗೆ ಸಂಬಂಧಿಸಿದಂತೆ ವಿವಿಧ ಸಚಿವಾಲಯಗಳ ಅನುದಾನದ

ಬೇಡಿಕೆಗಳ ಕುರಿತಂತೆ ಪ್ರಮುಖ ಚರ್ಚೆ ನಿಗದಿಪಡಿಸಲಾಗಿರುವುದರಿಂದ ವಿಪ್ ಜಾರಿ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

***************

ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ-ಪಿಎಫ್ಆರ್‌ಡಿಎ ಏಕೀಕೃತ ಪಿಂಚಣಿ ಯೋಜನೆ ಯುಪಿಎಸ್‌ನ ಅನುಷ್ಠಾನಕ್ಕೆ ನಿಯಮಗಳನ್ನು ಸೂಚಿಸಿದೆ.

ಈ ವರ್ಷದ ಜನವರಿಯಲ್ಲಿ ಭಾರತ ಸರ್ಕಾರ ನೂತನ ಪಿಂಚಣಿ ಯೋಜನೆ ವ್ಯಾಪ್ತಿಗೆ ಒಳಪಡುವ ಕೇಂದ್ರ ಸರ್ಕಾರಿ ನೌಕರರಿಗಾಗಿ ಯುಪಿಎಸ್ ಅಧಿಸೂಚನೆಯನ್ನು ಹೊರಡಿಸಿದ ನಂತರ ಈ ಕ್ರಮ ಕೈಗೊಳ್ಳಲಾಗಿದೆ.

ಈ ನಿಯಮಗಳು ಮುಂದಿನ ತಿಂಗಳ ೧ ರಿಂದ ಜಾರಿಗೆ ಬರಲಿವೆ. ಈ ನಿಯಮಗಳು ಮೂರು ವರ್ಗದ ಕೇಂದ್ರ ಸರ್ಕಾರಿ ನೌಕರರ ದಾಖಲಾತಿಗೆ ಅನುವು ಮಾಡಿಕೊಡುತ್ತದೆ. ಮೊದಲ ವರ್ಗ ಏಪ್ರಿಲ್ ೧ ರಂದು ಸೇವೆಯಲ್ಲಿರುವ ಅಸ್ತಿತ್ವದಲ್ಲಿರುವ ಕೇಂದ್ರ ಸರ್ಕಾರಿ ನೌಕರರನ್ನು ಒಳಗೊಂಡಿದೆ, ಅವರು ನೂತನ ಪಿಂಚಣಿ ಯೋಜನೆ ವ್ಯಾಪ್ತಿಗೆ ಒಳಪಡುತ್ತಾರೆ, ಆದರೆ ಎರಡನೇ ವರ್ಗ ಏಪ್ರಿಲ್ ೧ ರಂದು ಮತ್ತು ನಂತರ ಸೇವೆಗೆ ಸೇರುವ ಅಥವಾ ಕೇಂದ್ರ ಸರ್ಕಾರಿ ಸೇವೆಗಳಲ್ಲಿ ಹೊಸದಾಗಿ ನೇಮಕಗೊಂಡವರನ್ನು ಒಳಗೊಂಡಿದೆ.

***************

ಜಿಂಬಾಬ್ವೆಯ ಕಿರ್ಸ್ಟಿ ಕೊವೆಂಟ್ರಿ ಅಂತಾರಾಷ್ಟ್ರೀಯ ಒಲಿಂಪಿಕ್ ಸಮಿತಿ - ಐಒಸಿಯ ಅಧ್ಯಕ್ಷೆಯಾಗಿ ಆಯ್ಕೆಯಾಗಿದ್ದಾರೆ. ಅವರು ಐಒಸಿ ಇತಿಹಾಸದಲ್ಲೇ ಮೊದಲ ಮಹಿಳಾ ಅಧ್ಯಕ್ಷೆಯಾಗಿದ್ದಾರೆ. ೪೧ ವರ್ಷದ ಕೊವೆಂಟ್ರಿ ಅವರನ್ನು ಗ್ರೀಸ್‌ನ ಕೋಸ್ಟಾ ನವಾರಿನೊದಲ್ಲಿ ನಿನ್ನೆ ನಡೆದ ೧೪೪ ನೇ ಐಒಸಿ ಅಧಿವೇಶನದಲ್ಲಿ ಆಯ್ಕೆ ಮಾಡಲಾಯಿತು. ಅಧ್ಯಕ್ಷರಾಗಿ ಆಯ್ಕೆಯಾದ ಕೊವೆಂಟ್ರಿ ಮೊದಲ ಸುತ್ತಿನಲ್ಲಿ ಚಲಾವಣೆಯಾದ ೯೭ ಮತಗಳಲ್ಲಿ ಬಹುಮತಕ್ಕೆ ಅಗತ್ಯವಿದ್ದ ೪೯ ಮತಗಳನ್ನು ಅವರು ಪಡೆದರು. ಜೂನ್ ೨೩ ರ ನಂತರ ಅಧಿಕೃತವಾಗಿ ೧೨ ವರ್ಷಗಳ ಅಧಿಕಾರಾವಧಿ ಕೊನೆಗೊಳಿಸಲಿರುವ ಒಂಬತ್ತನೇ ಐಒಸಿ ಅಧ್ಯಕ್ಷ ಥಾಮಸ್ ಬಾಚ್ ಅವರ ಸ್ಥಾನವನ್ನು ಕೊವೆಂಟ್ರಿ ವಹಿಸಿಕೊಳ್ಳಲಿದ್ದಾರೆ.

ಐಒಸಿಯ ಮೊದಲ ಮಹಿಳಾ ಅಧ್ಯಕ್ಷೆಯಾಗಿ ಆಯ್ಕೆಯಾದ ಕಿರ್ಸ್ಟಿ ಕೊವೆಂಟ್ರಿ ಅವರನ್ನು ಅಂತಾರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ - ಐಸಿಸಿ ಅಧ್ಯಕ್ಷ ಜಯ ಶಾ ಅಭಿನಂದಿಸಿದ್ದಾರೆ. ಕೊವೆಂಟ್ರಿ ಅವರನ್ನು ಐಒಸಿ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ ೧೪೪ ನೇ ಐಒಸಿ ಅಧಿವೇಶನದಲ್ಲಿ ಅವರು ಉಪಸ್ಥಿತರಿದ್ದರು.

***************

ಕರ್ನಾಟಕದಲ್ಲಿ ಇಂದಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯಲಿದ್ದು, ಏಪ್ರಿಲ್ ೪ಕ್ಕೆ ಅಂತ್ಯಗೊಳ್ಳಲಿದೆ. ಇಂದು ಪ್ರಥಮ ಭಾಷೆ ಕನ್ನಡ, ಸಂಸ್ಕೃತ, ಹಿಂದಿ ಮತ್ತು ಉರ್ದು ಪರೀಕ್ಷೆ ನಡೆಯಲಿದೆ. ಬೆಳಗ್ಗೆ ೧೦ ರಿಂದ ಮಧ್ಯಾಹ್ನ ೧.೧೫ರವರೆಗೆ ಪರೀಕ್ಷೆ ನಡೆಯಲಿದೆ.

ಈ ಬಾರಿ ಒಟ್ಟು ೮ ಲಕ್ಷದ ೯೬ ಸಾವಿರದ ೪೪೭ ವಿದ್ಯಾರ್ಥಿಗಳು ನೋಂದಣಿ ಮಾಡಿಕೊಂಡಿದ್ದಾರೆ. ೩ ಲಕ್ಷದ ೩೫ ಸಾವಿರದ ೪೬೮ ಬಾಲಕರು ೩ ಲಕ್ಷದ ೭೮ ಸಾವಿರದ ೩೮೯ ಬಾಲಕಿಯರು ಮತ್ತು ೫ ತೃತೀಯ ಲಿಂಗಿಗಳಿದ್ದಾರೆ. ಒಟ್ಟು ೨ ಸಾವಿರದ ೮೧೮ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಗೆ ಬಿಗಿ ಭದ್ರತಾ ವ್ಯವಸ್ಥೆ ಮಾಡಲಾಗಿದೆ. ವೆಬ್‌ಕಾಸ್ಟಿಂಗ್ ವ್ಯವಸ್ಥೆಯೂ ಇರಲಿದ್ದು, ಜಿಲ್ಲಾಧಿಕಾರಿಗಳು ವೀಕ್ಷಣೆ ಮಾಡಲಿದ್ದಾರೆ. ಪರೀಕ್ಷಾ ಸಮಯದಲ್ಲಿ ಕೇಂದ್ರಗಳ ಸುತ್ತ ೨೦೦ ಮೀಟರ್ ಪ್ರದೇಶವನ್ನು ನಿಷೇಧಿತ ಪ್ರದೇಶ ಎಂದು ಪರಿಗಣಿಸಿ, ಜೆರಾಕ್ಸ್, ಸೈಬರ್, ಕಂಪ್ಯೂಟರ್ ಕೇಂದ್ರಗಳನ್ನು ಮುಚ್ಚುವಂತೆ ಆದೇಶ ನೀಡಲಾಗಿದೆ.

***************

ಹಮಾಸ್ ನಿನ್ನೆ ಇಸ್ರೇಲ್‌ನ ಟೆಲ್ ಅವೀವ್‌ನಲ್ಲಿ ವೈಮಾನಿಕ ದಾಳಿ ನಡೆಸಿದೆ. ಇಸ್ರೇಲ್ ಗಾಜಾದಲ್ಲಿ ಮಿಲಿಟರಿ ಕಾರ್ಯಾಚರಣೆಯನ್ನು ಪುನರಾರಂಭಿಸಿದ ನಂತರ ಹಮಾಸ್‌ನ ಮೊದಲ ಪ್ರತಿಕ್ರಿಯೆ ಇದಾಗಿದೆ.

ಹಮಾಸ್ ಹಾರಿಸಿದ ಒಂದು ರಾಕೆಟ್ ಅನ್ನು ತಡೆಹಿಡಿಯಲಾಯಿತು ಮತ್ತು ಇತರ ಎರಡು ಜನವಸತಿಯಿಲ್ಲದ ಪ್ರದೇಶಗಳಲ್ಲಿ ಬಿದ್ದವು ಎಂದು ಇಸ್ರೇಲ್ ರಕ್ಷಣಾ ಪಡೆಗಳು ತಿಳಿಸಿದೆ. ಏತನ್ಮಧ್ಯೆ,

ಹಮಾಸ್‌ನ ಆರೋಗ್ಯ ಸಚಿವಾಲಯಮಧ್ಯರಾತ್ರಿಯಿಂದ ಇಸ್ರೇಲಿ ವೈಮಾನಿಕ ದಾಳಿಯಲ್ಲಿ ಕನಿಷ್ಠ ೮೫ ಪ್ಯಾಲೆಸ್ತೀನಿಯನ್ನರು ಸಾವನ್ನಪ್ಪಿದ್ದಾರೆ ಎಂದು ವರದಿ ಮಾಡಿದೆ.

ಇತ್ತೀಚಿನ ದಾಳಿಯಲ್ಲಿ ೧೩೩ ಜನರು ಗಾಯಗೊಂಡಿದ್ದಾರೆ ಎಂದು ಸಚಿವಾಲಯ ತಿಳಿಸಿದೆ. ಹಮಾಸ್ ಇನ್ನೂ ೫೯ ಒತ್ತೆಯಾಳುಗಳನ್ನು ಹಿಡಿದಿಟ್ಟುಕೊಂಡಿದೆ ಎಂದು ಇಸ್ರೇಲಿ ಸರ್ಕಾರ, ಹೇಳಿಕೊಂಡಿದ್ದು, ಅವರಲ್ಲಿ ೨೪ ಮಂದಿ ಇನ್ನು ಜೀವಂತವಾಗಿದ್ದಾರೆಂದು ಎಂದು ವಿಶ್ವಾಸ ವ್ಯಕ್ತಪಡಿಸಿದೆ.

**************

ನವದೆಹಲಿಯ ಇಂದಿರಾಗಾಂಧಿ ಕ್ರೀಡಾಂಗಣದಲ್ಲಿ ನಿನ್ನೆ ಖೇಲೋ ಇಂಡಿಯಾ ಪ್ಯಾರಾ ಕ್ರೀಡಾಕೂಟದ ಎರಡನೇ ಆವೃತ್ತಿಯನ್ನು ಕೇಂದ್ರ ಯುವಜನ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ.ಮನ್ಸುಖ್ ಮಾಡವೀಯ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಈ ಕ್ರೀಡಾಕೂಟಗಳಿಗೆ ಯಶಸ್ಸಿನ ಹಾದಿಯಲ್ಲಿ ಮುನ್ನಡೆಯಲು ಅವಕಾಶ ಒದಗಿಸುತ್ತದೆ. ದೇಶಕ್ಕೆ ಕೀರ್ತಿ ತರಲು ಶ್ರಮಿಸುತ್ತಿರುವ ಕ್ರೀಡಾಪಟುಗಳಿಗೆ ಖೇಲೊ ಇಂಡಿಯಾ ಉತ್ತಮ ವೇದಿಕೆಯಾಗಿದೆ. ಇದೇ ೨೭ರವರೆಗೆ ನಡೆಯಲಿರುವ ಕ್ರೀಡಾಕೂಟದಲ್ಲಿ ೧ ಸಾವಿರದ ೩೦೦ಕ್ಕೂ ಅಧಿಕ ಕ್ರೀಡಾಪಟುಗಳು ಭಾಗವಹಿಸಿದ್ದಾರೆ ಎಂದು ಹೇಳಿದರು.

ಧ್ವನಿ: ಮನ್ಸುಖ್ ಮಾಂಡವೀಯ

ತಳಮಟ್ಟದಲ್ಲಿ ಕ್ರೀಡೆಯನ್ನು ಉತ್ತೇಜಿಸುವ ಉಪಕ್ರಮದ ಭಾಗವಾಗಿ ಕೇಂದ್ರ ಸರ್ಕಾರ ಈ ಕ್ರೀಡಾಕೂಟವನ್ನು ಆಯೋಜಿಸಿದೆ.

ಜವಹರಲಾಲ್ ನೆಹರು ಕ್ರೀಡಾಂಗಣ, ಇಂದಿರಾಗಾಂಧಿ ಕ್ರೀಡಾಂಗಣ ಮತ್ತು ಡಾ. ಕರ್ಣಿಸಿಂಗ್ ಶೂಟಿಂಗ್ ರೇಂಜ್‌ನಲ್ಲಿ ಕ್ರೀಡಾಕೂಟ ನಡೆಯಲಿದೆ. ಪ್ಯಾರಾ ಅರ್ಚರಿ, ಪ್ಯಾರಾ ಅಥ್ಲಿಟಿಕ್ಸ್, ಪ್ಯಾರಾ ಬ್ಯಾಡ್ಮಿಂಟನ್, ಪ್ಯಾರಾ ಶೂಟಿಂಗ್, ಪ್ಯಾರಾ ಟೇಬಲ್ ಟೆನಿಸ್ ಮತ್ತು ಪ್ಯಾರಾ ಪವರ್ ಲಿಫ್ಟಿಂಗ್ ಕ್ರೀಡೆಗಳು ನಡೆಯಲಿವೆ.

***************

ಸ್ವಿಟ್ಜರ್‌ಲ್ಯಾಂಡ್‌ನ ಬಾಸೆಲ್‌ನಲ್ಲಿ ನಡೆಯುತ್ತಿರುವ ಸ್ವಿಸ್ ಓಪನ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ನಲ್ಲಿ ಭಾರತದ ಅಗ್ರ ಮಹಿಳಾ ಡಬಲ್ಸ್ ಜೋಡಿ ತ್ರಿಶಾ ಜಾಲಿ ಮತ್ತು ಗಾಯತ್ರಿ ಗೋಪಿಚಂದ್ ಮಹಿಳಾ ಡಬಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಭಾರತದ ಜೋಡಿ, ಜರ್ಮನಿಯ ಅಮೆಲಿ ಲೆಹ್ಮನ್ ಮತ್ತು ಸೆಲಿನ್ ಹಬ್‌ಷ್ ವಿರುದ್ಧ ೨೧-೧೨ ೨೧-೮ ಸೆಟ್‌ಗಳ ಅಂತರದಲ್ಲಿ ಜಯ ಸಾಧಿಸಿ, ಮುಂದಿನ ಹಂತಕ್ಕೆ ಪ್ರವೇಶ ಪಡೆದಿದೆ.

ಕ್ವಾಟರ್ ಫೈನಲ್‌ನಲ್ಲಿಂದು ಭಾರತದ ಜೋಡಿ ಚೀನಾದ ಎಂಟನೇ ಶ್ರೇಯಾಂಕದ ಯೆಯುಂಗ್ ಎನ್‌ಗಾ ಟಿಂಗ್ ಮತ್ತು ಯೆಯುಂಗ್ ಪುಯಿ ಲ್ಯಾಮ್ ಅವರನ್ನು ಎದುರಿಸಲಿದ್ದಾರೆ.

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಶಂಕರ್ ಸುಬ್ರಮಣಿಯನ್ ಕೂಡ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಇಟ್ಟಿದ್ದಾರೆ. ಕ್ವಾರ್ಟರ್ ಫೈನಲ್‌ನಲ್ಲಿ ಅವರು ಡೆನ್ಮಾರ್ಕ್‌ನ ಆಂಡರ್ಸ್ ಆಂಟಾನ್‌ಸೆನ್ ಅವರನ್ನು ೧೮-೨೧, ೨೧-೧೨, ೨೧-೫ ಅಂತರದಲ್ಲಿ ಸೋಲಿಸಿದರು. ಮುಂದಿನ ಸುತ್ತಿನಲ್ಲಿ ಅವರು ಫ್ರಾನ್ಸ್‌ನ ಕ್ರಿಸ್ಟೋ ಪೊಪೊವ್ ಅವರನ್ನು ಎದುರಿಸಲಿದ್ದಾರೆ.

***************

ಮುಂಬೈನಲ್ಲಿ ನಡೆಯುತ್ತಿರುವ ಪ್ರತಿಷ್ಠಿತ ಹಾಂಕಾಂಗ್ ಅಂತಾರಾಷ್ಟ್ರೀಯ ಚಲನಚಿತ್ರ ಮತ್ತು ಟಿವಿ ಮಾರುಕಟ್ಟೆ -ಫಿಲಂ ಮಾರ್ಟ್ ನಂತಹ ಜಾಗತಿಕ ವೇದಿಕೆಗೆ ಭಾರತದ ಚಲನಚಿತ್ರರಂಗ ಇದೇ ಮೊದಲ ಬಾರಿಗೆ ಭಾರತ ಪೆವಿಲಿಯನ್‌ಗೆ ಪಾದರ್ಪಣೆ ಮಾಡಿರುವುದು ಅವಿಸ್ಮರಣೀಯ ದಿನವಾಗಿದೆ.

ಹಾಂಕಾಂಗ್ ಮತ್ತು ಮಕೌವ್‌ನ ಕನ್ಸುಲ್ ಜನರಲ್ ಆಫ್ ಇಂಡಿಯಾ ಸತ್ವನ್ ಖನಾಲಿಯಾ ಪೆವಿಲಿಯನ್‌ಗೆ ಚಾಲನೆ ನೀಡಿದರು. ಅಂತಾರಾಷ್ಟ್ರೀಯ ಚಲನಚಿತ್ರ ರಂಗ ಮತ್ತು ಮಾಧ್ಯಮ ಕೈಗಾರಿಕೋದ್ಯಮದಲ್ಲಿ ಭಾರತದ ಅಸ್ತಿತ್ತವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಇದು ಒಂದು ಪ್ರಮುಖ ಹೆಜ್ಜೆಯಾಗಿದೆ.